ಚಾಮುಂಡೇಶ್ವರಿ ವಿದ್ಯುತ್‌ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ – ಕೊಡಗು,
ಶ್ರೀ ಹರ್ಷರಸ್ತೆ, ಮೈಸೂರು.
ದೂರವಾಣಿ: 0821-2420850

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
O&M Circle, Chamarajanagar-Kodagu,
MPL Compound, Sri Harsha Road,
Mysuru-570001.
Web site: www.cescmysore.org
E-mail ID: seechnkodagu@cescmysore.org

Company Identity Number (CIN):U40109KA2004SGC035177

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2023-24/ CYS- 1224    ದಿನಾಂಕ: 08 JAN 2024

## -: ಸಭೆಯ ನಡಾವಳಿಗಳು :-

ದಿನಾಂಕ: 07.12.2023 ರಂದು ಹರದನಹಳ್ಳಿ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್ (ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ತ್ರೈಮಾಸಿಕ ಜನ ಸಂಪರ್ಕ ಸಭಾ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:**

1. ಶ್ರೀ ಸೋಮಶೇಖರ್ : ಅದೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ/ಕೊಡಗು ವೃತ್ತ
2. ಶ್ರೀ. ದ್ರುಪದ್ ವಿ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹರದನಹಳ್ಳಿ ಉಪವಿಭಾಗ
3. ಶ್ರೀ. ಪ್ರದೀಪ್‌ಕುಮಾರ್ ಎಂ ಸಿ : ಸಹಾಯಕ ಇಂಜಿನಿಯರ್(ತಾಂ) ಹರದನಹಳ್ಳಿ ಉಪ ವಿಭಾಗ
4. ಶ್ರೀ ವಸಂತ್‌ಕುಮಾರ್. ಎನ್ : ಕಿರಿಯ ಇಂಜಿನಿಯರ್(ವಿ), ಹರದನಹಳ್ಳಿ ಶಾಖೆ.
5. ಶ್ರೀ. ನವೀನ್. ಎಂ : ಕಿರಿಯ ಇಂಜಿನಿಯರ್(ವಿ), ಅರಕಲವಾಡಿ ಶಾಖೆ.
6. ಶ್ರೀ. ಸತೀಶ ಎ : ಕಿರಿಯ ಇಂಜಿನಿಯರ್(ವಿ), ಹರವೆ ಶಾಖೆ.
7. ಶ್ರೀ. ಮಹದೇವಸ್ವಾಮಿ ಪಿ : ಕಿರಿಯ ಇಂಜಿನಿಯರ್(ವಿ), ಉಡಿಗಾಲ ಶಾಖೆ.
8. ಶ್ರೀ ಪಿ ಮಹದೇವಸ್ವಾಮಿ : ಪ್ರಭಾರ ಹಿರಿಯ ಸಹಾಯಕ, ಹರದನಹಳ್ಳಿ ಉಪವಿಭಾಗ

ಅದೀಕ್ಷಕ ಇಂಜಿನಿಯರ್(ವಿ) ರವರು ಸಭೆಗೆ ಹಾಜರಾದ ಎಲ್ಲರನ್ನು ಸ್ವಾಗತಿಸಿ ಸ್ಥಳೀಯ ಅಧಿಕಾರಿಗಳನ್ನೊಳಗೊಂಡಂತೆ ಜನಸಂಪರ್ಕಸಭೆ ಆಯೋಜಿಸಿ ಅಹವಾಲುಗಳನ್ನು ಸ್ವೀಕರಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಈ ಸಭೆಯನ್ನು ನಡೆಸಲಾಗುತ್ತಿದ್ದು ವಿದ್ಯುತ್ ಸರಬರಾಜು, ನಿರ್ವಹಣೆ ಹಾಗು ಇನ್ನಿತರ ಸಮಸ್ಯೆಗಳ ಬಗ್ಗೆ ತಮ್ಮ ಅಹವಾಲುಗಳನ್ನು ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ಸಭೆಗೆ ಮಂಡಿಸುವಂತೆ ಕೋರಿದರು ಹಾಗು ಸದರಿ ಸಮಸ್ಯೆಗಳಿಗೆ ಆದ್ಯತೆ ಮೇಲೆ ಸಮಸ್ಯೆಗಳ ಪರಿಹಾರಕ್ಕಾಗಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

| ಕ್ರ.ಸಂ | ಸಲಹೆ/ದೂರುಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಸಲಹೆ/ದೂರುಗಳಿಗೆ ಉತ್ತರ |
|---|---|---|---|
| 01 | ಶ್ರೀ ಮುತ್ತರಾಜು, ಬಸವಾಪುರ ಗ್ರಾಮ ದೂರವಾಣಿ ಸಂಖ್ಯೆ: | ಸದರಿಯವರು<br>ಅ) ತಮ್ಮ ಜಮೀನಿನಲ್ಲಿ ಇರುವ ಕಂಬ ಸ್ಥಳಾಂತರಿಸಲು ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿ 10% ಹಣ ಪಾವತಿಸಿದ್ದು, ಕಂಬ ಸ್ಥಳಾಂತರಿಸಲು ಕ್ರಮ ಕೈಗೊಂಡಿರುವುದಿಲ್ಲ ಹಾಗೂ ಈ ಸಂಬಂಧ ಅರ್ಜಿ ಸಲ್ಲಿಸಿದ್ದರು ಇದುವರೆಗೂ ಅನುಪಾಲನೆ ವರದಿ ಕೊಟ್ಟಿರುವುದಿಲ್ಲ ಎಂದು ದೂರಿದರು<br>ಆ) ಹೊನ್ನಹಳ್ಳಿ ಐ.ಪಿ.ಮಾರ್ಗದ ಪರಿವರ್ತಕಗಳಲ್ಲಿ ಡೊಳ್ಳು ಬಿದ್ದಿರುವ ವಾಹಕವನ್ನು ಸರಿಪಡಿಸಲು ಮನವಿ ಮಾಡಿದರು. | ಇದಕ್ಕೆ ಉತ್ತರಿಸಿದ ಸಭಾಧ್ಯಕ್ಷರು<br>ಅ) ಶಾಖಾಧಿಕಾರಿಗಳಿಂದ ವಿವರ ಪಡೆದು ಗ್ರಾಹಕರಿಗೆ ಸ್ವಯಂ ಕಾರ್ಯನಿರ್ವಹಣೆ ಯೋಜನೆಯ ಬಗ್ಗೆ ನಿಗಮದ ನಿಯಮವನ್ನು ವಿವರಿಸಿದರು. ನಂತರ ಉಪವಿಭಾಗಾಧಿಕಾರಿಗಳನ್ನು ವಿಚಾರಿಸಲಾಗಿ ಈಗಾಗಲೇ ಈ ಸಂಬಂದ ಹಿಂಬರಹ ನೀಡಲಾಗಿರುತ್ತದೆ, ಆದರೂ ಸಹ ಮತ್ತೊಮ್ಮೆ ಹಿಂಬರಹ ನೀಡಲಾಗುವುದು ಎಂದು ತಿಳಿಸಿದರು.<br>ಆ) ಶಿಥಿಲಗೊಂಡಿರುವ ವಾಹಕ ಬದಲಿಸಲು ಮತ್ತು ಡೊಳ್ಳು ಬಿದ್ದಿರುವ ಮಾರ್ಗಕ್ಕೆ ಮಧ್ಯಂತರ ಕಂಬಗಳನ್ನು ಅಳವಡಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು. |

| | | | |
|---|---|---|---|
| | | ಇ) ಕಾವೇರಿ ನೀರಾವರಿ ನಿಗಮದ ವತಿಯಿಂದ ಕೊಳವೆ ಬಾವಿ ಕೊರೆಸಲಾಗಿದ್ದು ಪರಿವರ್ತಕ ಅಳವಡಿಸು ಸಂದರ್ಭದಲ್ಲಿ ಪಕ್ಕದ ಜಮೀನಿನವರು ಅಡ್ಡಿಪಡಿಸಿದ್ದು ಇದುವರೆಗೂ ನಿಗಮದ ವತಿಯಿಂದ ಪರಿವರ್ತಕ ಅಳವಡಿಸಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ದೂರಿದರು. | ಇ) ಇದಕ್ಕೆ ಉತ್ತರಿಸಿದ ಸಭಾಧ್ಯಕ್ಷರು ಸದರಿ ಕಾಮಗಾರಿಯನ್ನು ಕಾವೇರಿ ನೀರಾವರಿ ನಿಗಮವು ಚಾವಿಸನಿನಿ ನಿಗಮಕ್ಕೆ 10% ಅಂದಾಜುಪಟ್ಟಿ ವೆಚ್ಚವನ್ನು ಭರಿಸಿ ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ನಿರ್ವಹಿಸುತ್ತಿದ್ದು ಹೆಚ್ಚಿನ ವಿವರಗಳಗಾಗಿ ಕಾವೇರಿ ನೀರಾವರಿ ನಿಗಮವನ್ನು ಸಂಪರ್ಕಿಸಲು ಸೂಚಿಸಿದರು. |
| 02 | ಶ್ರೀ ತಂಗವೇಲು, ಅಟ್ಟುಗುಳಿಪುರ ಗ್ರಾಮ ದೂರವಾಣಿ ಸಂಖ್ಯೆ: .9480092585 | * ಸದರಿರವರು ಅಟ್ಟುಗುಳಿಪುರ ಗ್ರಾಮದಲ್ಲಿ ಒಂದು ಮನೆ ಖರೀದಿಸಿದ್ದು ಸದರಿ ಮನೆಯಲ್ಲಿ ಭಾಗ್ಯಜ್ಯೋತಿ ಮಾಪಕವಿದ್ದು ಈ ಹಿಂದೆ ವಾಸವಿದ್ದ ವಾರಸುದಾರರ ಹೆಸರಿನಲ್ಲಿರುತ್ತದೆ. ಸದರಿ ಭಾಗ್ಯಜ್ಯೋತಿ ಆರ್‌ಆರ್‌ಸಂಖ್ಯೆಯ ಗ್ರಾಹಕರ ಹೆಸರನ್ನು ಹಾಲಿ ವಾರಸುದಾರರಾದ ತಮ್ಮ ಹೆಸರಿಗೆ ಬದಲಾಯಿಸಿಕೊಡಲು ಮನವಿ ಮಾಡಿದರು. | * ಇದಕ್ಕೆ ಉತ್ತರಿಸಿದ ಸಭಾಧ್ಯಕ್ಷರು ಭಾಗ್ಯಜ್ಯೋತಿ (ಎಲ್‌ಟಿ-1) ಯೋಜನೆಯಡಿ ಮಂಜೂರಾದ ಆರ್‌ಆರ್ ಸಂಖ್ಯೆಯ ಗ್ರಾಹಕರ ಹೆಸರನ್ನು ನಿಗಮದ ನಿಯಮಾನುಸಾರ ಬದಲಾಯಿಸಲು ಅವಕಾಶವಿರುವುದಿಲ್ಲ ಆದ್ದರಿಂದ ಸದರಿ ಆರ್‌ಆರ್ ಸಂಖ್ಯೆಯನ್ನು ಎಲ್.ಟಿ-1 ಜಕಾತಿಯಿಂದ ಎಲ್.ಟಿ-2 ಜಕಾತಿಗೆ ವರ್ಗಾಹಿಸಿಕೊಂಡು ನಂತರ ನಿಗಮದ ನಿಯಮಾನುಸಾರ ದಾಖಲಾತಿಗಳನ್ನು ಸಲ್ಲಿಸಿ ಹೆಸರು ಬದಲಾವಣೆ ಮಾಡಿಕೊಳ್ಳಲು ತಿಳಿಸಿದರು |
| 03 | ಶ್ರೀ ಮಂಜು, ಹರವೆ ಗ್ರಾಮ ದೂರವಾಣಿ ಸಂಖ್ಯೆ: 7406060399 | * ಸದರಿ ರವರು ಮುಕ್ಕಡಹಳ್ಳಿ ಗ್ರಾಮದಲ್ಲಿರುವ ಹೆಚ್.ಟಿ. ಸ್ಥಾವರ ಸಿದ್ದಗಂಗಾ ಜಲ್ಲಿ ಕ್ರಷರ್‌ನಲ್ಲಿ ಕೆಲಸ ಮಾಡುತ್ತಿದ್ದು ಸದರಿ ಸ್ಥಾವರಕ್ಕೆ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡುತ್ತಿರುವುದಿಲ್ಲ ಹಾಗೂ ಅಧಿಕ ಅಡಚಣೆ ಇರುವುದರಿಂದ ಕಂಪನಿಗೆ ತುಂಬಾ ನಷ್ಟವಾಗುತ್ತಿರುವುದಾಗಿ ದೂರಿರುತ್ತಾರೆ | * ಇದಕ್ಕೆ ಉತ್ತರಿಸಿದ ಸಭಾಧ್ಯಕ್ಷ ಉಪವಿಭಾಗಾದಿಕಾರಿಗಳು ಹಾಗೂ ಶಾಖಾಧಿಕಾರಿಗಳನ್ನು ಪರ್ಯಾಯ ವ್ಯವಸ್ಥೆ ಕೇಳಲಾಗಿ. ಹೊಸಹಳ್ಳಿ ಎನ್.ಜೆ.ವೈ ಮಾರ್ಗಕ್ಕೆ 3 ಕಿ.ಮೀ ಲಿಂಕ್‌ಲೈನ್ ರಚಿಸಿ ಆ ವ್ಯಾಪ್ತಿಗೆ ಬರುವ 3 ಕ್ರಷರ್‌ಗಳ ಒತ್ತಡವನ್ನು ವರ್ಗಾಹಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು |
| 04 | ಶ್ರೀ ಮೇಘನಾಯ್ಕ, ಹೊನ್ನೇಗೌಡನಹಳ್ಳಿ ಗ್ರಾಮ ದೂರವಾಣಿ ಸಂಖ್ಯೆ: 7349102894 | * ಸದರಿ ಗ್ರಾಹಕರು ಚಾಮರಾಜನಗರದ ಕಟ್ಟಕಡೆಯ ಗ್ರಾಮವಾದ ಹೊನ್ನೇಗೌಡನಹಳ್ಳಿ ಗ್ರಾಮದಲ್ಲಿ ವಾಸಿಸುತ್ತಿದ್ದು ಸುಮಾರು 18 ವಾಸದ ಮನೆಗಳಿರುತ್ತದೆ. ಈ ಗ್ರಾಮವು ಕಾಡಂಚಿನ ಗ್ರಾಮವಾಗಿದ್ದು ಇದುವರೆಗೂ ವಿದ್ಯುತ್ ಸಂಪರ್ಕ ಕಲ್ಪಿಸಿರುವುದಿಲ್ಲ ಆದ್ದರಿಂದ ಜರೂರಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲು ಮನವಿ ಪತ್ರ ಸಲ್ಲಿಸಿದರು | * ಇದಕ್ಕೆ ಉತ್ತರಿಸಿದ ಸಭಾಧ್ಯಕ್ಷರು ಹೊನ್ನೇಗೌಡನಹಳ್ಳಿ ಗ್ರಾಮಕ್ಕೆ ವಿದ್ಯುತ್ ಮಾರ್ಗ ರಚಿಸಲು ಅರಣ್ಯ ಇಲಾಖೆಯಿಂದ ಅನುಮತಿ ಪಡೆಯಬೇಕಾಗಿರುತ್ತದೆ. ಆದರಿಂದ ಸದರಿ ಸ್ಥಳವನ್ನು ಖುದ್ದು ಬೇಟಿ ನೀಡಿ ಮುಂದೆ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಪರಿಶೀಲಿಸಲಾಗುವುದು ಎಂದು ತಿಳಿಸಿದರು |

ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

[signature] 8/1

ಅಧೀಕ್ಷಕ ಇಂಜಿನಿಯರ್(ವಿ).
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:-

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಚಾಮರಾಜನಗರ ರವರಿಗೆ ಮಾಹಿತಿಗಾಗಿ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಹರದನಹಳ್ಳಿ ಉಪವಿಭಾಗ ರವರ ಮಾಹಿತಿಗಾಗಿ. ಹಾಗೂ ದೂರುಗಳ ಪರಿಹಾರಕ್ಕೆ ಅವಶ್ಯಕ ಕ್ರಮವಹಿಸಲು ತಿಳಿಸಲಾಗಿದೆ.
7. ಹಿಆಸ/ಪ್ರಕ/ಕಡತ.